ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 5, Mar-Apr, 2023, Pp. 29-35.
©*IIMRD*, Mysuru

www.iimrd.com

# ಪು.ತಿ.ನ. ರವರ "ಗೋಕುಲ ನಿರ್ಗಮನ" ನಾಟಕದ ವಸ್ತು ಮತ್ತು ಆಶಯ

**ಡಾ. ಮೂಡಲಗಿರಿಯಯ್ಯ***

*ಕನ್ನಡ ಪ್ರಾಧ್ಯಾಪಕರು, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು.

***ಸಾರಾಂಶ: (Abstract)***

*ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಚಾರ್ ಅವರು ವೈಷ್ಣವ ಪರಂಪರೆಯ ತೀರ್ಥಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಮೇಲುಕೋಟೆಯಲ್ಲಿ ನೆಲೆಸಿದ್ದವರು. ಇವರು ವೈದಿಕ ಮನೆತನಕ್ಕೆ ಸೇರಿದವರು. ಇವರ ಪೂರ್ವಜರು ಕೆಲವು ಶತಮಾನಗಳ ಹಿಂದೆ ತಮಿಳುನಾಡಿನಿಂದ ಮೇಲುಕೋಟೆಗೆ ಬಂದು ನೆಲೆಸಿದವರು. ಇವರ ತಂದೆ ಶ್ರೀ ತಿರುನಾರಾಯಣ ಅಯ್ಯಂಗಾರ್ ಮತ್ತು ಗೊರೂರಿನ ರಂಗಮ್ಮ ದಂಪತಿಗಳ ಮೊದಲ ಮಗನಾಗಿ 1905ರಲ್ಲಿ ಜನಿಸಿದರು. ಪು.ತಿ.ನ. ಅವರು ಸಾಹಿತ್ಯದ ಸೃಷ್ಟಿಯಲ್ಲಿ ಕಾವ್ಯ, ನಾಟಕ, ಲಲಿತ ಪ್ರಬಂಧ, ಭಾವ ಪ್ರಬಂಧ, ಕಾವ್ಯಾರ್ಥ ಚಿಂತನೆ ಮತ್ತು ಅನುವಾದ ಮುಂತಾದ ಹಲವು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡವರು. ಇವರ ಅತ್ಯುತ್ತಮ ನಾಟಕಗಳಲ್ಲಿ ಒಂದಾದ 'ಗೋಕುಲ ನಿರ್ಗಮನ' ಈ ನಾಟಕದ ವಸ್ತು ಮತ್ತು ನಾಟಕದ ಆಶಯವನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

***ಮುಖ್ಯಪದಗಳು: (Keywords)*** *ಪು.ತಿ.ನ, ಗೋಕುಲ ನಿರ್ಗಮನ, ಕನ್ನಡ ನಾಟಕ,* ಮೇಲುಕೋಟೆ.

**ಪೀಠಿಕೆ**

ಪು.ತಿ.ನ.ರವರು ಪುರಾಣದ ಕಥೆಯನ್ನು ತೆಗೆದುಕೊಂಡು ಪುರಾಣದ ವಸ್ತುವನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ನಾಟಕಕ್ಕೆ ಬಳಸಿಕೊಂಡು ಹೊಸಚಿಂತನೆಯ ವಿಭಿನ್ನ ಆವರಣಗಳನ್ನು ಸೃಷ್ಟಿಸಿದ್ದಾರೆ. ಪು.ತಿ.ನ. ಅವರ ಕವಿತೆಗಳಲ್ಲಿ ಕಾಣುವ ಹಾಡಿನ ಸಾಹಿತ್ಯ ಮತ್ತು ಸಂಗೀತ ಆಸಕ್ತರನ್ನು ಸೆಳೆದಂತೆ ಅವರ ನಾಟಕಗಳಲ್ಲಿನ ಹಾಡುಗಳು ಹೆಚ್ಚು ಜನರನ್ನು ಆಕರ್ಷಿಸಿದೆ. ಭಾವನೆಗಳ ಮೂಲಕ ಅಲ್ಲೋಲ ಕಲ್ಲೋಲವಾದ ಜಗತ್ತನ್ನು ಕವಿ ದೂರದಲ್ಲಿ ನಿಂತು ಅನುಭವಿಸಿ, ಅನುಭವಗಳನ್ನು ಪರಿಶೀಲಿಸಿ ಚಿಂತಿಸಿ ಕವಿತೆಗಳನ್ನು ಬರೆದಂತೆ, ನಾಟಕದ ಹಾಡುಗಳನ್ನು ತಮ್ಮ ಭಾವದ ಒಳನೇಯ್ಗೆಯಲ್ಲಿ ಕಾವ್ಯಾತ್ಮಕವಾಗಿ ರಚಿಸಿದ್ದಾರೆ. ನಾಟಕದ ಪಾತ್ರಗಳು ನೇರವಾಗಿ ಹೊಮ್ಮಿ ಚಿಮ್ಮುವ ಹಾಡುಗಳು ನಾಟಕದ ವಸ್ತು ಮತ್ತು ಆಶಯಗಳಿಗೆ ಪೂರಕವಾಗಿ ಮೂಡಿ ಬಂದಿರುವುದು ಅವರ ಕಾವ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಕವಿ ತಾನು ನಿರ್ಮಿಸಿದ ಸಾಹಿತ್ಯಕ್ಕೆ ತನ್ನ ಮನೋಭೀಷ್ಟದ ಸಂಗೀತವನ್ನು ತಾನೇ ಅಳವಡಿಸಿ ಸಂಗೀತ ಮತ್ತು ಸಾಹಿತ್ಯಗಳಲ್ಲಿ ಒಳ್ಳೆಯ ಅಭಿರುಚಿಯುಳ್ಳ ಸಹೃದಯ ವೃಂದಕ್ಕೆ ಸಂತೋಷವನ್ನುಂಟು ಮಾಡುವ ಪ್ರಸಂಗಗಳು ತುಂಬ ವಿರಳ. ಇಂತಹ ಮಹತ್ವದ ಕಾರ್ಯಗಳಲ್ಲಿ ಪು.ತಿ.ನ.ರವರದ್ದು ದೊಡ್ಡ ಸ್ಥಾನ.

*Please cite this article as: ಮೂಡಲಗಿರಿಯಯ್ಯ.* (2023). ಪು.ತಿ.ನ ರವರ "ಗೋಕುಲ ನಿರ್ಗಮನ" ನಾಟಕದ ವಸ್ತು ಮತ್ತು ಆಶಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 29–35.*

ಸ್ವರ ಪ್ರಸ್ತಾರದೊಂದಿಗೆ ಪ್ರಕಟವಾಗುತ್ತಿರುವ ಪು.ತಿ.ನ ರವರ ಗೀತರೂಪಕಗಳು ಕನ್ನಡ ಕುಲ ರಸಿಕರಿಗೆ ರಸದೌತಣ ಅವರ ಗೀತೆಗಳ ಶೈಲಿ, ಧಾಟಿ, ನಾವಿನ್ಯತೆ ಮತ್ತು ಅವರು ಬಳಸಿದ್ದ ಕೆಲವು ಹೊಸರಾಗಗಳು ಕುತೂಹಲವನ್ನು ಕೆರಳಿಸಿದವು. ಶಾಸ್ತ್ರದ ಜಾಡಿನಲ್ಲಿ ಸಿಕ್ಕಿಕೊಳ್ಳದೆ ಸಂಪ್ರದಾಯ ಕಾರಣಕ್ಕೂ ಬೀಳದೆ ತಮ್ಮದೇ ಆದ ಹೊಸ ದಾರಿಯನ್ನು ಕಂಡು ಕೊಂಡವರು. ಇವರು ರಚಿಸಿದ ಪ್ರತಿಯೊಂದು ಗೀತರೂಪಕಗಳು ವಿಶಿಷ್ಟ ರಸಾನುಭವವನ್ನು ಹೊಂದಿದೆ. ಒಂದೊಂದು ಕೂಡ ಸಾಹಿತ್ಯ ಮತ್ತು ಸಂಗೀತಗಳ ಮಧುರ ಸಮ್ಮಿಲನದ ರಸಬುಗ್ಗೆಯಾಗಿದೆ. ಇವರು ಒಂದು ಹಾಡನ್ನು ಮಾಡುವ ಮೊದಲು ಸಂಗೀತದ ಮಟ್ಟನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅನಂತರ ಅದಕ್ಕೆ ಹೊಂದುವ ಸಾಹಿತ್ಯವನ್ನು ಕಲ್ಪಿಸುತ್ತಾರೆ. ಇವರ ಗೀತೆಗಳ ಸೃಷ್ಟಿಯಲ್ಲಿ ಗಾಂಭೀರ್ಯವಿದೆ ಬಿಗಿಯಿದೆ ಕುಶಲತೆಯಿದೆ ಕಲಾಪಾಕ ಪೂರ್ಣತೆಯಿದೆ ಇವರ ಯಾವುದೇ ಗೀತರೂಪಕವನ್ನು ತೆಗೆದುಕೊಂಡರೂ ಆರಂಭದಿಂದ ಅಂತ್ಯದವರೆಗೂ ಶ್ರೋತೃಗಳ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಗೀತೆಗಳಲ್ಲಿರುವ ವೈವಿದ್ಯತೆ. ಶಾಸ್ತ್ರೀಯ ಸಂಗೀತ ವೃಂದಗಾನ, ಸುಗಮ ಸಂಗೀತ, ಜಾನಪದ ದಾಟಿ ಹೀಗೆ ವಿವಿಧ ರಸಪಾಕಗಳನ್ನು ಒಳಗೊಂಡ ಗೀತರೂಪಗಳು ವಿವಿಧ ಅಭಿರುಚಿಯುಳ್ಳ ರಸಿಕರಿಗೆಲ್ಲರಿಗೂ ಅಪ್ಯಾಯಮಾನವಾಗುತ್ತವೆ. ಅಷ್ಟೇ ಅಲ್ಲದೆ ಸ್ವತಂತ್ರವಾದ ಇವರ ಕಲ್ಪನ ಪ್ರವಾಹದಲ್ಲಿ ಅನೇಕ ನೂತನ ರಾಗಗಳು ಮೈತಾಳಿ ಬಂದಿದೆ. ವಾಸಂತಿ. ಸಂಜೀವಿನಿ, ಹರಿಣೆ, ಋತುವಿಲಾಸ, ಗಾಂಧಾರ ಮಾಲ, ಋಷಭ ವಿಲಾಸ ಮತ್ತು ಇನ್ನೂ ನಾಮಕರಣವಾಗಿಲ್ಲದೆ ಇರುವ ಅನೇಕ ಸುಂದರವಾದ ರಾಗಗಳು ಸಂಗೀತಕ್ಕೆ ಪು.ತಿ.ನ ನೀಡಿರುವ ಕೊಡುಗೆ ಅಪಾರವಾದದ್ದು. ಈ ಹಾಡನ್ನು ಗಮನಿಸಿದರೆ ಕಾವ್ಯದ ಪಲಕುಗಳು ರಸವತ್ತಾದ ಸಂಗೀತದ ಮಾಧುರ್ಯ್ಯವನ್ನು ಸವಿಯಬಹುದು.

***ಮುಡಿಪಿದನು ಕೇಳೆನ್ನ ಸರಸತಿಯ ಬಂಧು***
***ನೆನೆಯದಿರು ನಮ್ಮೊಲವನಿಂತಳೆವೆನೆಂದು***
***ನಿನ್ನ ನೇಹದೊಳೆನಲ್ಲಿ ಎನಿತಾತ್ಮದೀಪ್ತಿ***
***ಅದ ನಿಂತು ಭಾವಿಸಲು ಬಗೆಗಿನಿಸು ತೃಪ್ತಿ***

ರಜನಿ ಪಥ:

***ಚೋದ್ಯಮಿದಯ್ಯ ತಾಮಸಿಯ ಕಳೆವೆಯೋ***
***ಳನುರಾಗಮುದಿಸಿದೊರು ತಿಂಗಳಿನ ಬೆಳಕಿದಾಯ್ದು***
***ಬಯಲೊಳಗೆ ಬನವಾಯ್ತು ನೆಲದೊಳಗೆ ರೂಪಾಯ್ತು***
***ಕಾಲಹಿಮ್ಮೊಗ ಹಿರಿದು ಗೋಕುಲವೇ ಕಣ್ಣಯಲ್ಲತು.***

**ಹಿನ್ನೆಲೆ:**

ಭಾವಗೀತದ ಸಂಗೀತದ ತಳಹದಿಯ ಮೇಲೆ ಗೋಕುಲ ನಿರ್ಗಮನ ನಿಂತಿದೆ. ಗೀತ ನಾಟಕವನ್ನು ಮೊದಲು ಪು.ತ.ನ ಆರಂಭಿಸುತ್ತಾರೆ. ಬೇಂದ್ರೆಯೂ ಗೀತ ನಾಟಕವನ್ನು ಬರೆಯುವ ಸಾಲಿನಲ್ಲಿ ಸೇರುತ್ತಾರೆ.

ಅಹಲ್ಯೆ ಮತ್ತು ಗೋಕುಲ ನಿರ್ಗಮನ ಮುಂತಾದವು ಭಾರತೀಯ ಸಂಸ್ಕೃತಿ ಮತ್ತು ಪುರಾಣದ ಆಚೆಗೆ ನಮ್ಮದೇ ಆದ ಬದುಕು ಕಟ್ಟಿಕೊಡುವ ವ್ಯವಸ್ಥೆಯೊಳಗೆ ಗೋಕುಲ ಎನ್ನುವುದು ಬಹಳ ಮುಖ್ಯವಾಗುತ್ತದೆ. ಮೌಲ್ಯ ಮತ್ತು ಪರಂಪರೆಯ ಬಗ್ಗೆ ಮಾತನಾಡುವ ಹೊತ್ತಿಗೆ ಸಂಪ್ರದಾಯದ ಬದುಕಿನ ಬಗ್ಗೆ ತಿಳಿಗೊಳಿಸಲಾಗುತ್ತದೆ.

ಗೋಕುಲ ನಿರ್ಗಮನ ನಾಟಕವು ಪುರಾಣದ ಕಥೆಯಾದರೂ ಮೂಲದಲ್ಲಿ ಇಲ್ಲದ ಭಾವ ನಿರ್ಭರವಾದ, ಹೃದಯ ವಿದ್ರಾವಕವಾದ ವಸ್ತುವನ್ನು ಒಳಗೊಂಡಿದೆ. ಕೃಷ್ಣನ ಬದುಕಿನಲ್ಲಿ ಮಹತ್ವದ ಘಟ್ಟವನ್ನು ಆಯ್ದುಕೊಂಡು ಕೃಷ್ಣನಲ್ಲಾದ ಪರಿವರ್ತನೆ ಅವನ ಸುತ್ತಲಿನವರ ಮೇಲೆ ಪ್ರಭಾವ ಬೀರುವ ಪರಿಣಾಮವೇ ಗೋಕುಲ ನಿರ್ಗಮನದ ವಸ್ತುವಾಗಿದೆ. ಪೂರ್ವ ಯೌವನದ ಧೀರೋದತ್ತವಾದ ವ್ಯಕ್ತಿತ್ವವನ್ನು ವೇಣು ವಿಸರ್ಜನದಂತಹ ಸಾಂಕೇತಿಕ ಕ್ರಿಯೆಯಿಂದ ತ್ಯಜಿಸಿ, ಜೀವನದ ಜವಾಬ್ದಾರಿಗಳನ್ನು ನಿರ್ವಹಿಸಲು ಕೃಷ್ಣನು ಸಿದ್ಧನಾಗುವ ಸನ್ನಿವೇಶವು ಮತ್ತ್ಯಾರು ಕೂಡ ನಿರೂಪಿಸುವುದಕ್ಕೆ ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಹೃದಯಂಗಮವಾಗಿ ಸೊಗಸಾಗಿ ಮೂಡಿ ಬಂದಿದೆ.

ಭಾರತೀಯ ಸಂಸ್ಕೃತಿಯ ಪುರಾಣದೊಳಗೆ ಕೃಷ್ಣ ಬಹಳವಾಗಿ ಕಾಡುತ್ತಾನೆ. ಇಡೀ ಕೃಷ್ಣನನ್ನು ಕೊಳಲಾಗಿ, ಕೊಳಲನ್ನು ಬಿಟ್ಟು (ಎಲ್ಲರನ್ನು ಕರೆಯುವ) ಸುದರ್ಶನ ಚಕ್ರ ತೊಟ್ಟ ಸಂಭವಾಮಿ ಯುಗೇ ಯುಗೇ ಎನ್ನುವಂತೆ ಸಂಸ್ಕೃತಿಯ ನಾಯಕನಾಗಿ ಕಂಡುಬರುತ್ತಾನೆ. ಭಾರತೀಯ ಸಾಹಿತ್ಯ ಪರಂಪರೆಯೊಳಗೆ ದುರಂತ ನಾಯಕರೆಲ್ಲರನ್ನು ಪರಿದು ಬದುಕು ಸುಖಾಂತ್ಯದಲ್ಲಿರುತ್ತದೆ. ಉದಾ: ರಾಮ ಕೃಷ್ಣ. ಗಂಡು ಹೆಣ್ಣು ಎನ್ನುವಾಗ ದೈಹಿಕ ಸಂಬಂಧ ನಡೆಯಲೇಬೇಕು ಎನ್ನುವಾಗ ಅದನ್ನು ಮೀರಿ ರಾಧೆ (ಸಾಂಸ್ಕೃತಿಕ ಪದ) ಎನ್ನುವವಳು ಬೆಳೆಯುತ್ತಾಳೆ.

**"ಇಳೆಯ ಹೆಣ್ಣುಕ್ಕಳೆಲ್ಲ ಮೊದಲು ದೇವರಿಗೆ ಸಲ್ಲಬೇಕು"** ಇಂದ್ರ (ಅಹಲ್ಯೆ) ಹೇಳುತ್ತಾನೆ ಅಲ್ಲಿ ಅದರೆ ಇಲ್ಲಿ ಅಪೂರ್ವ ಜೋಡಿ–ರಾಧ ಕೃಷ್ಣ, ಇವರಿಬ್ಬರ ಸಂಬಂಧ ಮಾತ್ರ ಒಂದು ರೀತಿಯ ಕ್ಲಾಸ್‌ಮೇಟ್ ತರಹದ್ದಾಗಿತ್ತು. ತುಂಟತನ ರಸಿಕತೆ ಸಹಜತೆಯಿಂದ ಎಲ್ಲಾ ಗೋಪಿಕಾ ಸ್ತ್ರೀಯರು ಕೃಷ್ಣನನ್ನು ಇಷ್ಟಪಡುತ್ತಾರೆ. ಈ ನಾಟಕದಲ್ಲಿ ಕೃಷ್ಣ ಸಮುದಾಯದ ದೇವನಾಗಿ ಕಾಣುವ ಬದಲು ವ್ಯಕ್ತಿನಿಷ್ಠವಾಗಿ ಕಾಣುತ್ತಾನೆ. ಕೃಷ್ಣ–ರಾಧೆಯರ ನಡುವಿನ ಸಂಬಂಧ ವೈಯಕ್ತಿಕವಾದದ್ದು, ಹಾಗೆಯೇ ತುಂಬ ಖಾಸಗಿತನದ್ದು. ಕೆಲವೊಂದು ಸಾರಿ ನಾವು ಸಮುದಾಯದ ದೃಷ್ಟಿಯಿಂದ ನೋಡುತ್ತೇವೆ ಕೃಷ್ಣನಿಗೂ ಒಂದು ವೈಯಕ್ತಿಕ ಬದುಕಿದೆ ಎಂಬುದನ್ನು ಮರೆಯುತ್ತೇವೆ.

ಗೋಕುಲ ನಿರ್ಗಮನ–ಸಾಮಾನ್ಯವಾದುದ್ದಲ್ಲ. ಅದರಲ್ಲಿ ಒಂದು ವಿಶೇಷತೆ ಇದೆ. ಅದು ಕೇವಲ ಹೋಗುವ ಕ್ರಿಯೆ ಅಲ್ಲ; ಕೃಷ್ಣನ ಬಾಲ್ಯದ ದಿನಗಳು ಅವಿಸ್ಮರಣೀಯವಾದದ್ದು, ಇಲ್ಲಿಂದ ರಾಧೆಯ ಖಾಸಗಿ ಪ್ರೇಮದ ವಿಚಾರದವರೆಗೆ ಕೃಷ್ಣ ಬೆಳೆಯುತ್ತಾನೆ. (ಮಹಾಭಾರದಲ್ಲಿ ಜನಪದದಲ್ಲಿ ಈ ಸನ್ನವೇಶ ಎಲ್ಲಿಯೂ ಇಲ್ಲ ಇದೊಂದು ಕಲ್ಪನೆ. ಸತ್ಯಭಾಮ–ಕೃಷ್ಣ–ರಾಧೆ, ರಾಧೆ–ಕೃಷ್ಣರ ಸಂಬಂಧ ಒಂದು ಸಂತೋಷ, ಸಮೃದ್ಧಿಯ ಸಂಕೇತ. ಇವರಿಬ್ಬರ ಸಂಭಾಷಣೆಯ ಮೂಲಕ ನೋಡುವುದಾದರೆ;

- ನಾಗರಿಕ ಜಗತ್ತಿನೊಳಗೆ ನಿನ್ನ ಮುಗ್ಧ ಜೀವನ ಬೇಕಾಗಿಲ್ಲ – ರಾಧ

- ರಾಧೆಗೆ ಮದುವೆ ಆಗಿದೆ ಎನ್ನುವುದಿಲ್ಲ. ಇದು ಮುಖ್ಯ ಬದಲಾವಣೆ. (ಸಂಬಂಧ ಅನ್ನುವುದನ್ನು ಹುಡುಕಾಡುವಾಗ)
- ಯಾವ ಸಂಬಂಧಗಳು ಪೂರ್ವಯೋಜಿತ ಅಲ್ಲ, ಅದೊಂದು ಆಕಸ್ಮಿಕ

ಗೋಕುಲ ನಿರ್ಗಮನ ಎಂದಾಗ ಗೋಕುಲಕ್ಕೆ ನಷ್ಟ ಸಮುದಾಯ ನೆಲೆಗಳಲ್ಲಿ ನಿರ್ಗಮನ ಲಾಭವಾದರೂ ವ್ಯಕ್ತಿನಿಷ್ಠತೆಯ ನೆಲೆಯಲ್ಲಿ ಕೃಷ್ಣನಿಗೆ ನಷ್ಟವಾಗುತ್ತದೆ. ಇಡೀ ಕಥನ ಪರಂಪರೆಯಲ್ಲಿ ತನಗಾಗಿ ಏನು ಮಾಡಿಕೊಂಡ ಎನ್ನುವುದು ಮುಖ್ಯ. ವಿಲಾಸಿ ಜೀವನ ನಡೆಸುತ್ತಿದ್ದ ಎನ್ನುವಾಗ ಅದು ವ್ಯಕ್ತಿಗತವಾಗಿ ಕಷ್ಟವನ್ನು ಪಡೆಯುತ್ತಾನೆ. ಕೃಷ್ಣನನ್ನು ವ್ಯಕ್ತಿನಿಷ್ಠವಾಗಿ ನೋಡುವಾಗ ಕೊಡುವ ಪ್ರಕ್ರಿಯೆಯಲ್ಲಿ ತನ್ನನ್ನು ತಾನು ಅರಿತು, ಎಲ್ಲವೂ ತಾನೇಯಾಗುವ ಕೃಷ್ಣ ಅನಾಥನಾಗಿ ಸಾಯುವುದು ಒಂದು ವಿಪರ್ಯಾಸ ಬಹುಶಃ ದೀಪ ಉರಿಯುವಾಗ ಬೆಳಕು ಕೊಡುವ ಪ್ರಕ್ರಿಯೆಯಂತೆ ಕೃಷ್ಣ ಕಂಡು ಬರುತ್ತಾನೆ.

ಈ ಶೀರ್ಷಿಕೆ ಗಮನಿಸಿದಾಗ ಗೋಕುಲದಿಂದ ಕೃಷ್ಣ ನಿರ್ಗಮನವಾಗುತ್ತಾನೆ ಎಂದು ಹೇಳುವಾಗ ಇನ್ನೊಂದು ಅರ್ಥದಲ್ಲಿ ಗೋಕುಲವೇ ಕೃಷ್ಣನೊಂದಿಗೆ ನಿರ್ಗಮನ ಆಯಿತು ಎಂದು ಹೇಳಬಹುದು. **“**ನೂರಿದ್ದರೆ ಇವನೊಬ್ಬನು ಇದ್ದಾಗ ನೊರೊಂದಾಗುತ್ತದೆ.**”**

- ಕಾವ್ಯ ಗೀತ ಲಹರಿಯೊಡನೆ ಹರಿಯುವ ಹೊತ್ತಿಗೆ ಸುಧಾರಿಸುತ್ತೆ
- ಅಕ್ರೂರ: ಕಂಸನ ಸುದ್ದಿಯನ್ನು ತಿಳಿಸಿ ಕೃಷ್ಣನನ್ನು ಗೋಕುಲದಿಂದ ನಿರ್ಗಮಿಸಲು ಬೆಣ್ಣೆ ತಿಂದು ಬೆಳೆಯುತ್ತಿರುವ ಕೃಷ್ಣ ತಕ್ಷಣವೇ ಕಂಸನನ್ನು ಕೊಲ್ಲುವ ಕ್ರಿಯೆ ಬಹಳ ಪ್ರಶ್ನಾರ್ಹವಾದದ್ದು.
- ಸುಬಲ: ಸಾಮುದಾಯಿಕ ನೆಲೆಯೊಳಗೆ ಒಂದು ಪ್ರಜ್ಞೆಯಾಗಿ ರಾಧೆಯ ಪಾತ್ರವಾಗಿ ತರುತ್ತಾರೆ ಪು.ತಿ.ನ. ರವರು ‘ಮದುವೆಯಾಗದಿರುವವಳು ಎಂಬ ದೊಡ್ಡ ಬದಲಾವಣೆಯನ್ನು ಇಲ್ಲಿ ತರುತ್ತಾರೆ’.
- ಹಿನ್ನೆಲೆ: ಅಕ್ರೂರನ ಆಗಮನ, ತೆರೆ ತೆರೆಯುವ ಮುನ್ನದ ಸನ್ನಿವೇಶ.
- ಸಖಿಯ ಪ್ರವೇಶ: ಬೃಂದಾವನಕೆ ಹೋಗೋಣ ಬಾ ಸಖಿ.
- ಕೃಷ್ಣನ ಕೊಳಲಿಗೆ ಇಡೀ ಪ್ರಕೃತಿಯೇ ಇರಬೇಕಾದರೆ ನಾವೇಕೆ ದೂರ ಇರಬೇಕು? ಆಗಾಗಿ ಬೃಂದಾವನಕೆ ಹೋಗೋಣ ಎಂದು ಕರೆಯುತ್ತಿರುವುದು ಇಲ್ಲಿ ಸೌಂದರ್ಯಪ್ರಜ್ಞೆಯ ಬಗ್ಗೆ ಚರ್ಚೆ ಮಾಡುತ್ತಾರೆ.
- ಅಕ್ರೂರ ಕಂಸನ ಆಸ್ಥಾನದಿಂದ ಬಂದಿದ್ದಾನೆ ಕೃಷ್ಣ ಇನ್ನೂ ತೆರೆಯ ಮೇಲೆ ಕಂಡಿಲ್ಲ; ದರ್ಶನವಾಗಿಲ್ಲ. ಆದರೂ ಅವನ ಬಗ್ಗೆ ಹೇಳುತ್ತಿರುವ ವಿಷಯವಿಲ್ಲ ಎಲ್ಲ ಮರೆತಿರುವಾಗ
- ಕೃಷ್ಣನ ಮೋಹನ ಮುರಳಿಯನ್ನು ಎಲ್ಲಾ ಜನರು ಬೆನ್ನತ್ತಿ ಹೋಗುತ್ತಿದ್ದಾರೆ. ಏಕೆಂದರೆ ಅದರ ಪ್ರಭಾವ ಅಷ್ಟಿತ್ತು.

- ಮೊದಲ ಶೀಲ ಅಂದರೆ ಅವನೊಬ್ಬ ಗುಣವಂತ ಆಕರ್ಷಕ ಗುಣವಂತ, ಕೃಷ್ಣನನ್ನು ಒಲಿಸಿಕೊಳ್ಳಲು ತನುಮನ ಎರಡೂ ಬೇಕು, ತೊಳಲುವಿಕೆಯಲ್ಲಿ ಬೇಸರ ನೋವು ಹುಡುಕಾಟ ವಿರಹ ಎಲ್ಲವೂ ಇರುತ್ತದೆ. ಗೋಕುಲ ನಿರ್ಗಮನದ ಕೃಷ್ಣ ತುಂಬಾ ಆಕರ್ಷಕನಾಗಿದ್ದಾನೆ.

- ಕೃಷ್ಣ ಮತ್ತು ಬಲರಾಮನ ಪ್ರವೇಶ: ಕೃಷ್ಣನಿಗೂ ಕೆಲವೊಮ್ಮೆ ಭಾವೋದ್ವೇಗ ಇರುತ್ತಿತ್ತು. ಅವನು ತನ್ನನು ತಾನು ಆತ್ಮವಲೋಕನ ಮಾಡಿಕೊಳ್ಳುತ್ತಾನೆ. ಈ ಕೊಳಲು ಎಲ್ಲಿಯೋ ಇದೊಂದು ಹುಲ್ಲು ಕಡ್ಡಿ ಎಂತಹ ಅದ್ಭುತ ಶಕ್ತಿ ಇದೆ. ಇದರಿಂದ ನನಗೊಂದು ಅಸ್ತಿತ್ವವಿದೆ. ಇದರಿಂದ ನಾದವಿದೆ ಗೋಕುಲವೆಲ್ಲಿ ಆನಂದದಿಂದ ತುಂಬಿದೆ. ಮೌನವಿರದು, ಮಾತು ಬರದು' 'ಅಂತರಂಗದ ಮೃದಂಗ ಅಂತು ತೋಂತನನ,' ಹಾಡು ಹಳೆಯದಾದರೇನು? ಭಾವ ನವನವೀನವು–ಜಿ.ಎಸ್.ಎಸ್. ಗಾಯಕ ಅದ್ಭುತವಾಗಿ ಹಾಡಿದರೂ ಭಾವ ತುಂಬದಿದ್ದರೆ ಅದು ವ್ಯರ್ಥವಾಗುದಲ್ಲವೇ ಆ ರೀತಿ ಭಾವವಿಲ್ಲದಿದ್ದರೆ ಅರ್ಥವು ವ್ಯರ್ಥವಾದಂತೆ. ಸೌಂದರ್ಯ ಎನ್ನುವುದು ಸರಳ ರೇಖೆಯಲ್ಲಿರುವುದಿಲ್ಲ, ಅದಕ್ಕಾಗಿ ವೈಯ್ಯಾರಕ್ಕೆ ಬಳುಕಿಗೆ ಒಂದು ವಿಶಿಷ್ಟ ಅರ್ಥವಿದೆ. ಇದು ಜೀವಕ್ಕೆ ಜೀವ ಬಂದಂತೆ ಇರಬೇಕು, ನನಗೂ ನನ್ನ ಆಹ್ಲಾದದ ನಡುವಿಗೂ ಈ ಬಿದಿರಿನ ಕೊಳಲು ಇದೆ. ನನಗೆ ನನ್ನ ಸಂತೋಷವನ್ನು ಅರಿವು ಮಾಡಿಕೊಳ್ಳುತ್ತದೆ. ಆದ್ದರಿಂದ ಕೃಷ್ಣನ ಅಸ್ತಿತ್ವವನ್ನು ಕೊಳಲು ರೂಪಿಸುತ್ತದೆ.

ನಿರ್ಗಮನ ಎನ್ನುವುದು ಏಕಕಾಲದಲ್ಲಿ ಭಾವನೆಗಳೆಲ್ಲ ನಿರ್ಗಮನವಾಗುತ್ತದೆ. ಇದು ಐತಿಹಾಸಿಕ ನಾಟಕವಾಗಿದೆ ಏಕೆಂದರೆ ಭಾವಗೀತೆಗಳ ಸಂಮಿಶ್ರಣ ಇಲ್ಲಿದೆ. ಮೊದಲು ಕೃಷ್ಣನ ಪ್ರವೇಶವಾಗದಿದ್ದರೂ ಅಮೂರ್ತವಾಗಿ ಕೃಷ್ಣ ನಮಗೆ ಕಾಣುತ್ತಾನೆ. ಅಂದರೆ ಭಾವವಾಗಿಯೇ ಕೃಷ್ಣ ಗೋಚರಿಸುತ್ತಾನೆ. ಮಹಾಭಾರತದ ಕೃಷ್ಣ ಎಲ್ಲರೊಳಗೂ ಒಂದು ಪಾತ್ರವಾಗಿ ಕಾಣುತ್ತಾನೆ. ಆದರೆ ಪರಂಪರೆಯೊಳಗೆ ಒಬ್ಬ ಭಾವವ್ಯಕ್ತಿಯಾಗಿ ಕಂಡು ಬರುತ್ತಾನೆ. ಕೃಷ್ಣ ಹೀಗೆ ಮೋಹನ ಮುರಳಿ ಕೃಷ್ಣ ಎನ್ನುವಂತಿಹುದು ಸಾಂಸ್ಕೃತಿಕ ಪದಕೋಶವಾಗಿ ಚಲಿಸುವಂತಹದು. ವರ್ತಮಾನದ ಬಗ್ಗೆ ಕೊಳಲು ಗೋಚರಿಸುತ್ತದೆ. ಈ ಕೊಳಲಿನಿಂದ ಕೃಷ್ಣ ಆತ್ಮಾವಲೋಕನ ಮಾಡಿಕೊಳ್ಳುತ್ತಾನೆ. ಸಾಹಿತ್ಯ ಸಂಗೀತ ಎರಡು ನಿಂತಿರುವುದು ಭಾವನೆಗಳ ರಸಾವೇಶಗಳ ನಡುವಿನಲ್ಲಿ.

- ಕೃಷ್ಣನಿಗೆ ಶಕ್ತಿ ಬಂದದ್ದು ಏಕೆ? ಇಲ್ಲಿ ಶ್ರೀರಾಮನ ಪಾತ್ರ ಕಟ್ಟಿಕೊಡುತ್ತಾರೆ. ಗೋಪಿಕ ಸ್ತ್ರೀಯರಲ್ಲಿ ರಾಧೆ ಆಗಿರುತ್ತಾಳೆ. ನಾವು ದ್ವಂದ್ವಗಳ ಮೇಲೆ ಬದುಕನ್ನು ರೂಪಿಸಿಕೊಳ್ಳುವುದರಲ್ಲಿ, ಬೇಕು ಬೇಡಗಳ ಪ್ರಶ್ನೆ ಎದುರಾಗುತ್ತದೆ. ಕೃಷ್ಣನ ಐಡೆಂಟಿಟಿಯನ್ನು ಗುರುತಿಸುವಾಗ ಕೃಷ್ಣನ ಶಕ್ತಿಯ ಮೇಲೆ ಕೊಳಲು ನಾದ ನಿಂತಿದೆ. ಹಾಗೇ ಗೋಪಿಕ ಸ್ತ್ರೀಯರಲ್ಲಿ ಕಂಡು ಕೊಳ್ಳುವಾಗ ಬಲರಾಮನ ಆಧಾರ ಮುಖ್ಯವಾಗುತ್ತದೆ. ಬಲರಾಮನ ವೈವಿಧ್ಯತೆಯ ಆಧಾರದ ಮೇಲೆ ಕೃಷ್ಣನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. "ತಳಿಸುವ ಪ್ರೇಮದ ಮಿಂಚಿನೊಳಗೆ" ಅಕ್ರೂರ ಕಾಣಿಸಿಕೊಳ್ಳುತ್ತಾನೆ. ಉಜ್ವಲ ಅಮೇಯ ಅಮಾಸ ಧೀರ ಆತ್ಮಬಾಲಕನ್ ಸದ್ಭಾವ ಸಂಪನ್ನತೆ ಈ ಕೃಷ್ಣ=ವೇಣು ವಿಸರ್ಜನ ಎನ್ನುವ ಉಪಶೀರ್ಷಿಕೆ ಈ ನಾಟಕದ ಉದ್ದೇಶ.

- ಪ್ರಾರ್ಥನೆ: ಪರಿಚಯಿಸಿಕೊಳ್ಳುವ ವಿದಾಯ ಈ ಮೂರು ಅರ್ಥದಲ್ಲಿ ನಮಸ್ಕಾರ ಕಂಡು ಬರುತ್ತದೆ.
- ಗೀತೆಯಲ್ಲಿ ಭಾವನೆ ಎನ್ನುವುದು ಬಹಳ ಮುಖ್ಯ ಯಾವ ಮೋಹನ ಮುರಳಿ ಕರೆಯಿತು ದೂರತೀರಕೆ ನಿನ್ನನು ನೆನಪಿಸುತ್ತದೆ. ಕೊಳಲಿನ ಧ್ವನಿಯ ಸ್ಮೃತಿಯ ಪ್ರಭಾವದಿಂದ ಕೃಷ್ಣನು ಅಮೂರ್ತವಾಗಿದ್ದರೂ ಭಾವನೆಯೊಳಗೆ ಕೃಷ್ಣನು ಕಾಣುತ್ತಾನೆ. ನಂತರ ಪರವಶಗೊಳಿಸುವ ತನ್ಮಯಗೊಳಿಸುವ ದ್ಯಾನದಲ್ಲಿ ಚಲಿಸುವಂತಿಹುದು ಈ ಕೊಳಲಿನ ಶಕ್ತಿ.

ಕೃಷ್ಣ ಬರುತ್ತಾನೆ ಹೋಗುತ್ತಾನೆ ಎನ್ನುವುದಕ್ಕಿಂತ ಮನದಲ್ಲಿ ಉಳಿಯುತ್ತಾನೆ ಇಲ್ಲಿ ರಾಧೆಯ ಆತಂಕ ಇಲ್ಲಿದೆ. ವಾರಿಜಲೋಚನ ಅವಳು ನನ್ನ ವಾರಿಜಲೋಚನೆ ಎನ್ನುವ ಮತ್ತು ಮೈಬಳಲಿಸುವುದು. ರಾಧೆಯನ್ನು ಮದುವೆಯಾಗಿಲ್ಲ, ಕೊನೆಗಳಿಗೆಯಲ್ಲಿ ಕೃಷ್ಣನು ರಾಧೆಯನ್ನು ನೋಡದೆ ಹೋಗುವುದು ಈ ನಾಟಕದ ವಿಶಿಷ್ಟತೆಯನ್ನು ಕಟ್ಟಿಕೊಡುತ್ತದೆ. ರಾಧೆಯೂ ಇಲ್ಲ, ಕೊಳಲು ಇಲ್ಲ ಈ ರೀತಿಯ ನೋವನ್ನು ಕೃಷ್ಣನೊಬ್ಬನೇ ಅನುಭವಿಸುತ್ತಾನೆ. ಗೋಕುಲಕ್ಕೂ ಗೋಕುಲಾದಾಚೆಗೂ ಕೃಷ್ಣನ ಸಂಬಂಧ ಏನು ಎಂಬುದನ್ನು ಇಲ್ಲಿ ತಿಳಿಯಬೇಕಾಗುತ್ತದೆ, ರಾಧೆ ಹೊರಟು ಹೋಗಿದ್ದಾಳೆ ಕೊಳಲು ಕಳೆದು ಹೋಗಿದೆ ಇವರಿಬ್ಬರನ್ನು ಸಮೀಕರಿಸುವ ಪ್ರಯತ್ನ ಕೃಷ್ಣ ಮಾಡುತ್ತಿದ್ದಾನೆ. ಬಲರಾಮನಿಗಿದು ಬರಿ ಬಿದಿರು. ಕೊಳಲಿಗೆ ಕೊಳಲಿದು ತರವಲ್ಲ.

ರಾಧೆ–ಕಂಸ, ಕೊಳಲು–ಚಕ್ರ. ಮುಗ್ಧ–ರೌದ್ರ ವಿರುದ್ಧ ನೆಲೆಗಳು ರೂಢಿಗತವಾಗಿವೆ. ಹೆಜ್ಜೆ ಹೆಜ್ಜೆಗೂ ನೆನಪಾಗುವ ಕೃಷ್ಣ ಗೋಪಿಕ ಸ್ತ್ರೀಯರಿಂದ ಮರೆಯಲು ಹೇಗೆ ಸಾಧ್ಯ? ಕೊಳಲು ಬನದಲಿ ಇರಲಿ ನಡೆ ಅಣ್ಣ ನಡೆ ಮುರಳಿಯ ಬಿಟ್ಟೆ, ಕೃಷ್ಣ ಬದಲಾದನು ರಾಧೆಯ ಕಳವಳ–ಎದೆಯ ತಳಮಳ ರೀತಿಯದು ಗೋಕುಲವ. ಕೊಳಲಿದೆ ಎನ್ನುವಾಗ ಪ್ರೀತಿಸುವ ರಾಧೆ, ಕೊಳಲಿಗಾಗಿ ಪ್ರೀತಿಸುವವಳು ರಾಧೆ ಎನ್ನುವ ಕೃಷ್ಣ, ಕೃಷ್ಣ ಕೊಳಲು ನುಡಿಸುವುದು ಸಮುದಾಯಕ್ಕೆ ಆದರೆ ಇದು ಅವನೊಳಗೆಯೇ ಉಳಿಯುತ್ತದೆ. ಕೊಳಲಿದ್ದದ್ದೆ ರಾಧೆಯ ಕಾರಣಕ್ಕಾಗಿ, ರಾಧೆ ಇಲ್ಲದಕ್ಕಾಗಿ ಕೃಷ್ಣ ಕುತಂತ್ರಿಯಾಗುತ್ತಾನೆ. (ಪ್ರೀತಿಯಿಂದಾಗಿ ಹುಡುಗ ಕುಡುಕನಾಗುವ ಹಾಗೆ).

ಕೃಷ್ಣ ಎನ್ನುವವನು ಸಾಂತ್ವನದ, ವಾತ್ಸಲ್ಯದ ಅರ್ಥ. ಸಮುದಾಯದ ದೃಷ್ಟಿಯಿಂದ ಕೃಷ್ಣನಿರುವಾಗ ಬದುಕು ದೇವಾಲಯದಂತೆ ಆದರೆ ಕಲಾ ಬದುಕು ಮುಳ್ಳಿದ್ದಂತೆ. ನೀನು ಹೊರಟು ಹೋದಾಗ ಎಲ್ಲವೂ ಜಡ ಯಾವುದು ಇಲ್ಲಿ ನಮ್ಮನ್ನು ನಾವು ಕಳೆದುಕೊಂಡಂತೆ ನೀನು ಹೋದರೆ ಹಿಂತಿರುಗಿ ಬರುತ್ತೀಯ(ಕೊಳಲು ಬಿಟ್ಟಿರುವೆ) ಗೋಕುಲವ ತೊರೆದನೆ, ನಿಮ್ಮೊಲವ ಮರೆತನೆ ಕೃಷ್ಣ ಕೊಳಲನ್ನು ತೆಗೆದುಕೊಂಡಿರುವುದು ಎಲ್ಲರ ಕಾರಣಕ್ಕಾಗಿ ಕೃಷ್ಣನ ಬದುಕು ಹರಿಯವ ನೀರಿನಂತೆ. ನಿಂತ ನೀರಲ್ಲ, 'ತೊರೆದನೆ ಕೊಳಲ ತೊರೆದನೆ ನೆನೆದನೆ ಬನ ನೆನೆದನೆ, ಕೊಳಲು ತೊರೆದು ಹೋದ ಕೃಷ್ಣ ಎನ್ನುವಾಗ ಬರುತ್ತಾನೆ ಎನ್ನುವ ಪ್ರಶ್ನೆ ಇಲ್ಲ, ಕೊಳಲು ಇನ್ನೂ ಬೆಚ್ಚಗಿದೆ ಹಿಡಿದಿಕೋ ರಾಧೆ, ಅಮೃತ ತುಂಬಿದ ಕಲಶಕ್ಕೆ ಬೆಲೆ ಅಮೃತವೇ ಇಲ್ಲದ ಕಲಶಕ್ಕೆ? –ನಾಗವೇಣಿ ಬಿದ್ದ ಕೊಳಲಿಗೆ ಗಾಳಿ ನುಸುಳಿ ಕೃಷ್ಣ ಬಾರಿಸಿದಂತಾಯಿತು,

ಇರುವಾಗ ಇಲ್ಲದಾಗ–ಕವಿ. ಬೇಸರ–ನೋವು–ಕೆಡುಕು ಈ ನಾಟಕದಲ್ಲಿ ಗೋಕುಲವೇ ನಿರ್ಗಮನ ಇದು ಕೃಷ್ಣ–ರಾಧೆಯ ವ್ಯಕ್ತಿತ್ವವಾಗಿ ಕಾಣುತ್ತದೆ.

ಈ ನಾಟಕದಲ್ಲಿ ಮುಖ್ಯವಾಗಿ ಎರಡು ನೆಲೆಗಳಲ್ಲಿ ಗೋಕುಲ ನಿರ್ಗಮನ ಸಾಂಕೇತಿಕವಾಗಿ ಕಾಣುತ್ತದೆ. ಒಂದು ಪ್ರತಿಯೊಬ್ಬನೂ ಕೊಡ ಗರಿ ಹಗುರವಾದ ಬಾಲ್ಯದಿಂದ ಕರ್ತವ್ಯ ಪ್ರಜ್ಞೆಯಿಂದಲೇ ಭಾರವಾದ ಪ್ರೌಢಾವಸ್ಥೆಯನ್ನು ಪ್ರವೇಶಿಸಬೇಕಾಗುತ್ತದೆ. ಗತಿಸಿದ ಸ್ಥಿತಿಗಾಗಿ ನಾಸ್ಟಾಲ್ಜಿಕ್ ಆಗುವುದು ತೀರಾ ಸಹಜ. ಈ ನೆಲೆಯಲ್ಲಿ ಕೃಷ್ಣನ ಪರಿವರ್ತನೆಯು ನಮ್ಮೆಲ್ಲರಲ್ಲೂ ಜರುಗಬೇಕಾದ ಸ್ಥಿತ್ಯಂತರವೂ ಹೌದು. ಇನ್ನೊಂದು ನೆಲೆಯಲ್ಲಿ ಈ ಕಥೆಯು ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಧ್ವನಿಸುತ್ತದೆ ಎಂಬ ವ್ಯಾಖ್ಯಾನವು ಬಂದಿದೆ ಅನ್ನುವುದನ್ನು ನೋಡಬಹುದು. ಡಾ.ಕೆ.ಮರುಳುಸಿದ್ದಪ್ಪನವರು ತುಂಬಾ ಸಮರ್ಥವಾಗಿ ಹೇಳಿದ್ದಾರೆ "ಪುರಾಣ ಕಥೆಯೊಂದು ಸಂಸ್ಕೃತಿಯ ಇತಿಹಾಸವನ್ನೇ ಧ್ವನಿಸುವಂತೆ ಅದನ್ನಿಲ್ಲಿ ಬಳಸಿಕೊಳ್ಳಲಾಗಿದೆ. ನಾಗರಿಕತೆಯ ಸೋಂಕಿಲ್ಲದೆ ಮುಗ್ದವಾಗಿ, ಸರಳವಾಗಿದ್ದ ಭಾರತೀಯ ಸಂಸ್ಕೃತಿ ಪಶ್ಚಿಮದ ಯಂತ್ರ ನಾಗರಿಕತೆಯ ಬಿರುಗಾಳಿಗೆ ಸಿಕ್ಕಿ ಕೃಷ್ಣನನ್ನು ಕಳೆದುಕೊಂಡ ಗೋಕುಲದಂತೆ ಪರಂಪರೆಯೊಂದಿಗೆ ಸಂಬಂಧವನ್ನು ಕಳೆದುಕೊಂಡು ಅನಾಥವಾಯಿತೆಂಬ ಒಳ ದನಿಯೊಂದು ನಾಟಕದುದ್ದಕ್ಕೂ ಕೇಳಿ ಬರುತ್ತದೆ. ಹೀಗೆ ಗೋಕುಲ ಸಾಂಕೇತಿಕವಾಗಿ ಧ್ವನಿಸುವುದರೊಂದಿಗೆ ಪೌರಾಣಿಕವಾಗಿ ಭಾಗವತ ಪರಂಪರೆಯ ಒಂದು ಅದ್ಭುತ ಕಥೆಯಾಗಿದೆ. ಪುರಾಣದ ನೆಲೆಯಿಂದ ನೋಡಿದಾಗ ಕೃಷ್ಣಭಕ್ತಿಯ ಆವೇಗ ನಾಟಕದ ಜೀವವಾಹಿನಿಯಾಗಿದೆ" ಪು.ತಿ.ನ. ಅವರ ಸಾರ್ವಕಾಲಿಕ ಮಹತ್ವವನ್ನು ತಿಳಿಯಲು ಇಂಥಹ ನಾಟಕಗಳ ವ್ಯಾಖ್ಯಾಗಳು ತುಂಬಾ ನೆರವಾಗುತ್ತವೆ.

**ಪರಾಮರ್ಶನ ಗ್ರಂಥಗಳು**


- ಮರುಳಸಿದ್ದಪ್ಪ. ಕೆ. (1993). ಆಧುಕನಿಕ ಕನ್ನಡ ನಾಟಕ. ಲಿಪಿಪ್ರಕಾಶನ, ಬೆಂಗಳೂರು.
- ರಾಮನಾಥ್. ಎಚ್.ಕೆ. (1990). ಕನ್ನಡ ರಂಗಭೂಮಿಯ ವಿಕಾಸ, ಅಭಿನಯ ಪ್ರಕಾಶನ.
- ಶಾಮರಾಯ. ತ.ಸು. (1962). ಕನ್ನಡ ನಾಟಕ. ಗೀತಾ ಬುಕ್ ಹೌಸ್, ಮೈಸೂರು.
- ಶಿವರುದ್ರಪ್ಪ. ಜಿ.ಎಸ್. (ಸಂ). (1972). ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ. ಬೆಂಗಳೂರು. ವಿ.ವಿ. ಬೆಂಗಳೂರು.
- ಶ್ರೀರಂಗ. (1987). ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.